

ಚಿತ್ರ: ಎಚ್.ಸತೀಶ್

ಅರಣ್ಯದಲ್ಲಿ ಹುಲಿ ಸಂತತಿ ಅಭಿವೃದ್ಧಿಗೆ ಅವಕಾಶವಿದೆ. ಅಲ್ಲಿಗೆ ಹುಲಿಗಳು ವಲಸೆ ಹೋಗಬಹುದು. ಇಂತಹ ಸಂದರ್ಭದಲ್ಲಿ ಈ ಕಾಡುಗಳನ್ನು ಜೋಡಿಸುವ ಕಾರಿಡಾರ್‌ಗಳು ನಿರ್ಮಾಣವಾಗದಿದ್ದರೆ ಮಾನವ –ಹುಲಿ ಸಂಘರ್ಷವನ್ನು ತಪ್ಪಿಸುವುದು ಕಷ್ಟವಾಗುತ್ತದೆ.

ಈ ರೀತಿಯ ಕಾರಿಡಾರ್‌ಗಳನ್ನು ನಿರ್ಮಾಣ ಮಾಡುವಾಗ ಕಾಡಿನ ಹೊರ ವಲಯವನ್ನು ವಶಕ್ಕೆ ತೆಗೆದುಕೊಂಡರೆ ಅಲ್ಲಿ ಗಣಿಗಾರಿಕೆ ನಿಷೇಧಿಸಲ್ಪಡುತ್ತದೆ, ಅಲ್ಲಿರುವ ಜನರು ಸ್ಥಳಾಂತರಗೊಳ್ಳಬೇಕಾಗುತ್ತದೆ ಎನ್ನುವ ಕಾರಣಕ್ಕೆ ಜನತೆ ಇದನ್ನು ವಿರೋಧಿಸುತ್ತಾರೆ. ಆದರೆ ಇಂದು ಇದನ್ನು ಅನುಸರಿಸದೇ ಯಾವುದೇ ಅನ್ಯಮಾರ್ಗ ನಮ್ಮ ಮುಂದಿಲ್ಲ ಎನ್ನುವುದೂ ಅಷ್ಟೇ ಖಚಿತ. ಕರ್ನಾಟಕದಲ್ಲಿ ಈ ಕಾರ್ಯ ಈಗಾಗಲೇ ನಡೆದಿದೆ. ಕಾವೇರಿ ವನ್ಯಜೀವಿ ಅಭಯಾರಣ್ಯ, ಸೋಮೇಶ್ವರ, ದಾಂಡೇಲಿ, ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನಗಳಲ್ಲೂ ರಾಜ್ಯ ಸರ್ಕಾರ ಸಂರಕ್ಷಿತ ಪ್ರದೇಶವನ್ನು 2,500 ಚ.ಕಿ.ಮೀ. ನಷ್ಟು ವಿಸ್ತರಿಸಿದೆ. 1970ರ ನಂತರ ಇದು ಅತೀ ಹೆಚ್ಚಿನ ವಿಸ್ತರಣೆ ಎನ್ನುವುದು ಗಮನಿಸಬೇಕಾದ ಅಂಶ.

ಕಾಡಿನಂಚಿನ ಜನರು ಉರುವಲು ಸಂಗ್ರಹಿಸುವುದಕ್ಕೆ ಕಾಡಿನೊಳಗೆ ಹೋಗುವುದನ್ನು ತಡೆಯಲು ಎಲ್.ಪಿ.ಜಿ. ಸಿಲಿಂಡರ್‌ಗಳ ವಿತರಣೆಯಿಂದ ಕಾಡಿನ ಗರ್ಭದೊಳಗೆ ಮಾನವ ಚಟುವಟಿಕೆಯನ್ನು ತಡೆಯಲಾಗುತ್ತಿದೆ. ಇದನ್ನು ಇನ್ನೂ ಹೆಚ್ಚಿನ ಪ್ರದೇಶಗಳಿಗೆ ವಿಸ್ತರಿಸಬೇಕು. ಹೆಚ್ಚಾದ ಹುಲಿಗಳ ಸಂಖ್ಯೆಗೆ ಆವಾಸವನ್ನು ಒದಗಿಸುವ ಜೊತೆ ಜೊತೆಗೇ, ಸಂರಕ್ಷಿತ ಪ್ರದೇಶದಲ್ಲಿರುವ ಹಳ್ಳಿಗಳ ಪುನರ್‌ವಸತಿ, ಮತ್ತು ಮಾನವ – ಹುಲಿ ಸಂಘರ್ಷಕ್ಕೆ ಎಡೆಕೊಡದಂತಹ ಎಚ್ಚರಿಕೆಯ ಕ್ರಮಗಳ ಅವಶ್ಯಕತೆ ಇದೆ. ಯಾವುದಾದರೂ ಹುಲಿ ನರಭಕ್ಷಕ ಎಂದು ಕಂಡು ಬಂದಲ್ಲಿ ತತ್‌ಕ್ಷಣ ಅದನ್ನು ಕೊಲ್ಲುವುದರಿಂದ ಜನರು ಹುಲಿ ಸಂತತಿಯ ವಿರುದ್ಧವಾಗುವುದನ್ನು ತಡೆಯಬಹುದು. ಯಾಕೆಂದರೆ, ಮಾನವ – ಹುಲಿ ಎಂಬ ವಿಷಯ ಬಂದಾಗ ಮನುಕುಲದ ಮರುಕ ಸಹಜವಾಗಿಯೇ ಮಾನವನೆಡೆಗೆ ಇರುತ್ತದೆ. ಕಾಡಿನಿಂದ ದೂರದ ನಾಡಿನಲ್ಲಿ ಕುಳಿತು ಹುಲಿಗೆ ಮರುಕ ತೋರಿಸುವುದು ಸುಲಭ ಸಾಧ್ಯ. ಆದರೆ ಬಂಧುವೊಬ್ಬ ತಮ್ಮ ಕಣ್ಣೆದುರೇ ಹುಲಿಗೆ ಬಲಿಯಾದಾಗ ಹುಲಿಯ ಬಗೆಗೆ ದ್ವೇಷ ಹುಟ್ಟುವುದು ಸಹಜ. ಇವೆಲ್ಲವನ್ನೂ ವೈಜ್ಞಾನಿಕವಾಗಿ ಸರಿಯಾದ ಕ್ರಮದಲ್ಲಿ ನಿರ್ಧರಿಸಿ ನಾವು ಹುಲಿ ಸಂರಕ್ಷಣೆ ಮಾಡಬೇಕಾಗಿದೆ. ಇದೊಂದು ಸವಾಲೇ ಆದರೂ ಅಸಾಧ್ಯವೇನಲ್ಲ. ಹಾಗಾದಾಗ ಮಾತ್ರ ಕರ್ನಾಟಕದ ಅರಣ್ಯ ಇಲಾಖೆಯ ಪ್ರಿನ್ಸಿಪಲ್ ಚೀಫ್ ಕನ್ಸರ್‌ವೇಟರ್ (ವನ್ಯಜೀವಿ) ವಿನಯ್ ಲೂಥ್ರಾ ಹೇಳುವಂತೆ, 2020ರ ವೇಳೆಗೆ ಕರ್ನಾಟಕದಲ್ಲಿ ಹುಲಿಗಳ ಸಂಖ್ಯೆ 600ನ್ನು ತಲುಪಲು ಸಾಧ್ಯವಿದೆ. ಅದು ನಮ್ಮ ಗುರಿಯೂ ಹೌದು.



